Lowering the wasteweir of Shanthisagar Tank

*Q.—379 Sri N. G. HALAPPA (Channagiri).—

Will the Minister for Public Works be pleased to state:

(*a*) whether it is a fact that the people of the surrounding villages of "Shanthisagar" tank in Channagiri Taluk Shimoga District, have been agitating from a pretty long time for the lowering of the wasteweir of the said tank as the same is causing much havoc to the surrounding villages;

(*b*) whether Government have taken any steps in this matter?

A.—Sri VEERENDRA PATIL (Minister for Public Works).—

(*a*) Yes.

(*b*) Yes. The lowering of the wasteweir will reduce the irrigation potential under the tank. As such other alternative measures of flood control are under examination.

ಶ್ರೀ ಎನ್. ಜಿ. ಹಾಲಪ್ಪ.—ಒಂದು ಪಕ್ಷ ಫ್ಲಡ್ ಕಂಟ್ರೋಲ್ ಮಾಡಿದರೂ ಸಹ ಆಜುಬಾಜು ಗ್ರಾಮಗಳಿಗೆ ಇರುವಂತಹ ಗೋಮಾಳ, ಹಿಡುವಳಿ ಸಹ 10-15 ಗ್ರಾಮಗಳಲ್ಲಿ ಮುಳುಗಿ ಜನರಿಗೆ ಬಹಳ ತೊಂದರೆಯಾಗಿದೆ ಎಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಫ್ಲಡ್ಸ್ ಬಂದಾಗ ಜನರಿಗೆ ಅನಾನುಕೂಲವಾಗುತ್ತದೆ, ಆಜು ಬಾಜು ಗ್ರಾಮಗಳು ಮುಳುಗಿಹೋಗುತ್ತವೆ ಎಂದು ಗೊತ್ತಿದೆ.

ಶ್ರೀ ಎನ್. ಜಿ. ಹಾಲಪ್ಪ.—ಈ ರೀತಿ ಫ್ಲಡ್ ಕಂಟ್ರೋಲ್ ಮಾಡುವುದರಿಂದಲೇ ಆಜುಬಾಜು ಗ್ರಾಮಗಳ ಜನರಿಗೆ ಪರಿಹಾರ ಸಿಕ್ಕುವುದಿಲ್ಲ, ಅಪ್‌ಸ್ಟ್ರೀಂ ನಲ್ಲಿ ಹರಿಯುವ ಹಳ್ಳಕ್ಕೆ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿ ಆ ಮೂಲಕ ಮುಳುಗಡೆಯಾಗತಕ್ಕ ಪ್ರದೇಶವನ್ನು ಕಡಿಮೆ ಮಾಡತಕ್ಕ ಉದ್ದೇಶ ಸರ್ಕಾರದವರಿಗೆ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಹೌದು, ಈ ರೀತಿಯಿಂದ ಮೇಲಿನಿಂದ ಬಹುಮಟ್ಟಿಗೆ ನೀರು ಹರಿದುಬರುತ್ತದೆ, ಆದ್ದರಿಂದ ಮೇಲ್ಭಾಗದಲ್ಲಿ ಸುಮಾರು 13 ಕೆರೆಗಳನ್ನು ಕಟ್ಟಬೇಕೆಂದು ವಿಚಾರ ಮಾಡಿದ್ದೇವೆ. ಈಗಾಗಲೇ 4 ಕೆರೆಗಳ ಕೆಲಸ ಪ್ರಾರಂಭವಾಗಿದೆ.

ಶ್ರೀ ಎನ್. ಜಿ. ಹಾಲಪ್ಪ.—ಈ 13 ಕೆರೆಗಳನ್ನು ಈ 4ನೇ ಪ್ಲಾನ್ ಪೀರಿಯಡ್‌ನಲ್ಲಿ ಮುಗಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—4 ಕೆರೆಗಳ ಕೆಲಸ ಪ್ರಾರಂಭ ಮಾಡಿದ್ದೇವೆ, ಇನ್ನು 9 ಕೆರೆಗಳ ಕೆಲಸ ಆಗಬೇಕು, ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚವಾಸ್ತಿಗೌಡ.—ಇದಕ್ಕೆ ನೆರೆಯ ನೀರು ಬರುವುದರಿಂದ ಇರಿಗೇಷನ್ ಪೊಟೆನ್ಷಿಯಲ್ ಯಾವ ರೀತಿಯಿಂದಲೂ ಕಡಿಮೆಯಾಗುವುದಿಲ್ಲ ಎಂಬುದನ್ನು ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರು ಆಲೋಚನೆ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ವೇಸ್ಟ್‌ವೇರ್ ಇಳಿಸಬೇಕೆಂದು ಹೇಳಿದ್ದಾರೆ, ಅದರಿಂದ ಕ್ಯಪಾಸಿಟಿ ಕಡಿಮೆಯಾಗುತ್ತದೆ, ರಿನವೇಷಂ ಕೆಳಗೆ ಇರುವಂತಹ ಅಚ್ಚುಕಟ್ಟಿಗೆ ನೀರು ಬರುವ ಹಾಗಿಲ್ಲ. ಆದ್ದರಿಂದ ಎರಡನೇ ರೀತಿಯಲ್ಲಿ ಜನರಿಗೆ ಅನಾನುಕೂಲವಾಗದ ಹಾಗೆ ಯಾವ ರೀತಿಯಿಂದ ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಾ ಇದ್ದೇವೆ.

Mr. SPEAKER.—Question No. 417 and 595 may be taken up together.